† ಶ್ರೀಮತಿ ಬಸವರಾಜೇಶ್ವರಿ.—ಡೋಣಿಕೆರೆ ವಿಚಾರ ತೆಗೆದುಕೊಂಡರೆ ದೊಂಬಲಕೆರೆ ಕ್ಯಾಚ್‌ಮೆಂಟ್ ಪ್ರದೇಶದಲ್ಲಿ 12-13 ನೂರು ಎಕರೆ ಜಮ್ಮು ಕಚ್ಚೀನಿದೆ ಅದಕ್ಕೇ ನೀರು ಸಾಲದು, ಹಾಗಿರುವಾಗ ಕ್ಯಾಚ್‌ಮೆಂಟ್ ಕಟ್ಟುವುದರಿಂದ ಇರುವ ರೈತರಿಗೆ ತೊಂದರೆಯಾಗಬಹುದು, ಫೀಡರ್ ಕೆನಾಲ್ ಒಂದೆರಡು ವರ್ಷಗಳಲ್ಲಿ ಪೂರ್ತಿಯಾಗುವುದು. ಆದುದರಿಂದ ನೀರಿನ ಅನುಕೂಲ ನೋಡಿ ಕೊಂಡು ಒಂದು ತೀರ್ಮಾನ ಮಾಡಬೇಕಾಗಿರುವುದರಿಂದ ಸರ್ಕಾರ ಪರಿಶೀಲಿಸುತ್ತಿದೆ. ಮುಷ್ಟಿಕೊಪ್ಪ ಕೆರೆಗೆ 1969-70 ನೆಯ ಸಾಲಿನ ಬಜೆಟ್ಟಿನಲ್ಲಿ ಅವಕಾಶ ಮಾಡಿತ್ತು. ಆದರೆ ಸ್ಥಳದ ಅಭಿಪ್ರಾಯ ಕೇಳಿದಾಗ ಸ್ವಲ್ಪಮಟ್ಟಿಗೆ ಅದರಿಂದ ಅನಾನುಕೂಲ ಎಂದು ಹೇಳಿರುವುದರಿಂದ ಆದನ್ನು ಮಾಡ ಬೇಕೇ ಬೇಡವೇ ಎಂದು ವಿಚಾರಮಾಡುತ್ತಿದ್ದೇವೆ. ಮತ್ತು ಅದರಿಂದ ಮುಳುಗಡೆಯಾಗುವ ಪ್ರದೇಶ ದವರು ತಕರಾರು ಮಾಡುತ್ತಿದ್ದಾರೆ. ಇದೆಲ್ಲವನ್ನೂ ಪರಿಶೀಲಿಸಲಾಗುತ್ತಿದೆ.

ಶ್ರೀ ಸಿದ್ದಯ್ಯ ಕಾಶೀಮಠ.—ಆ ಪ್ರದೇಶದಲ್ಲಿ ಬರಗಾಲ ಮೇಲೆಂದಮೇಲೆ ಬರುವುದರಿಂದ ತೀವ್ರವಾಗಿ ಈ ಕೆರೆಗಳ ಕೆಲಸ ತೆಗೆದುಕೊಳ್ಳುವಿರಾ ?

ಶ್ರೀಮತಿ ಬಸವರಾಜೇಶ್ವರಿ.—69-70 ರಲ್ಲಿ ಬಜೆಟ್ ಪ್ರಾವಿಷನ್ ಮಾಡಿತ್ತು. ಆದರೆ ಈಗಿರುವ ಅಚ್ಚುಕಟ್ಟಿಗೇ ನೀರು ಸಾಲದಿರುವಾಗ ಇನ್ನೊಂದು ಕೆರೆ ಕಟ್ಟುವುದು ಹೇಗೆ ? ಇದನ್ನು ಪರಿಶೀಲಿಸಿ ಅಂತಿಮ ತೀರ್ಮಾನ ತೆಗೆದುಕೊಳ್ಳಬೇಕಾಗಿದೆ.

ಶ್ರೀ ಎನ್. ಎಲ್. ಬೆಲ್ಲದ್.—ಮುಂಚೆ ಭೂಮಿಯನ್ನು ಅಕ್ವೈರ್ ಮಾಡಿ ಆಮೇಲೆ ಕೆಲಸ ತೆಗೆದುಕೊಳ್ಳಬೇಕಲ್ಲವೇ ?

ಶ್ರೀಮತಿ ಬಸವರಾಜೇಶ್ವರಿ.—ಪರಿಶೀಲನೆ ಪೂರ್ಣವಾದ ಮೇಲೆ ಅಂತಿಮ ತೀರ್ಮಾನ ತೆಗೆದು ಕೊಂಡು ಮುಂದುವರೆಯಬೇಕು.

ಶ್ರೀ ಸಿ. ಎಂ. ಚುರ್ಚಿಹಾಳ್‌ಮಠ.—ಈ ಕೆರೆಗಳನ್ನು ಕಟ್ಟಿದರೆ ನವಿೂಪದಲ್ಲಿರುವ ಬಾವಿ ಗಳಿಗೆ ನೀರು ಬರುವುದರಿಂದ ತೀವ್ರವಾಗಿ ಈ ಕೆಲಸ ಮಾಡುವಿರಾ ?

ಶ್ರೀಮತಿ ಬಸವರಾಜೇಶ್ವರಿ.—ಒಂದು ಕಡೆ ಕೆರೆ ಆಗಬೇಕೆಂದು ಹೇಳುತ್ತಿದ್ದಾರೆ, ಇನ್ನೊಂದು ಕಡೆ ಬಾವಿಗಳಿಗೆ ಪಂಪು ಹಾಕಿರುವವರು ತಮ್ಮ ಜಮೀನು ಕೆರೆ ಕಟ್ಟಿದರೆ ಮುಳುಗಡೆಯಾಗುವುದು ಎಂದು ಹೇಳುತ್ತಿದ್ದಾರೆ. ಆದುದರಿಂದ ಸಾಧಕಬಾಧಕಗಳನ್ನೆಲ್ಲಾ ವಿಚಾರಮಾಡಬೇಕಾಗಿದೆ.

Sanction of Forest Land for Coffee Cultivation in Yelandur, Kollegal and Chamarajanagar Taluks

219. Sri S. PUTTASWAMY (Chamarajanagar).—

Will the Minister of State for Forests be pleased to state :—

(*a*) the names of Coffee Estates in Chamarajanagar, Yelandur and Kollegal Taluks in Mysore District ;

(*b*) the extent of each Coffee estate and the extent of forest lands encroached upon and unauthorisedly cultivated for growing Coffee adjacent to each Coffee estate ;

(*c*) the action taken by the Government in respect of such forest land encroachment and unauthorised cultivation by Coffee Planters in each Estate ;

(*d*) whether it is a fact that the Government has sanctioned forest lands in exchange of some other lands to some Coffee Planters ;

(*e*) if so, the Coffee Estate to which such forest land has been sanctioned in exchange, and the extent of such land sanctioned ;

---

† Indicates that remarks or speeches have not been revised by the member concerned.

(*f*) whether it is a fact that such forest land has been sanctioned due to some political pressure and high influence used;

(*g*) if so, whether the Government has a proposal before it to enquire into the matter and cancel such sanction of forest lands in the interest of forest growth ?

Sri ALUR HANUMANTHAPPA (Minister of State for Forests).—

(*a*) The names of the Coffee Estates in the following three taluks are as follows :—

(i) Chamarajanagar Taluk :	(1) Bedaguli Estate (2) Gorahatti ,, (3) Kardikere ,,
(ii) Yelandur Taluk	Nil
(iii) Kollegal Taluk	(1) Honnamatti ,, (2) Attikhan ,,

(*b*) The extent of each Coffee Estate is as follows :—

(*1*) *Chamarajanagar Taluk*	*A. G.*
(i) Kardikere	205–14
(ii) Bedaguli	138–21
(iii) Gorahatti	183–15
Total	527–10

(*2*) *Kollegal Taluk*	*A. cents*
(i) Honnamatti	385–24
(ii) Do	184–00
(iii) Attikhan	434–71
Total ...	1003–95

No encroachments or unauthorised cultivation of forest lands by the abovementioned Estate holders in their adjoining forest lands has come to the notice of the Forest Department.

(*c*) Does not arise in view of reply to clause (*b*).

(*d*) Yes.

(*e*) In Kollegal taluk an area of 50 acres from Moolepathy forest area which is adjacent to the Honnamatti Estate was granted on lease in exchange for lands in higher reaches of the Ghats.

(*f*) No.

(*g*) Does not arise in view of reply to clause (*f*).

ಶ್ರೀ ಎಸ್. ಪುಟ್ಟಸ್ವಾಮಿ.—(ಬಿ) ಪ್ರಶ್ನೆಗೆ ಉತ್ತರವಾಗಿ ಎಸ್ಟೇಟುಗಳ ಹಿಡುವಳಿದಾರರು ಅರಣ್ಯ ಭೂಮಿಯನ್ನು ಅತಿಕ್ರಮಿಸಿ ಅನಧಿಕೃತವಾಗಿ ಸಾಗು ಮಾಡುತ್ತಿರುವುದು ಅರಣ್ಯ ಇಲಾಖೆ ಗಮನಕ್ಕೆ ಬಂದಿಲ್ಲ ಎಂದು ತಿಳಿಸಲಾಗಿದೆ. ಈಗ ಈ ಎಸ್ಟೇಟುಗಳ ಸುತ್ತ ಮುತ್ತ ಇರುವ ಪ್ರದೇಶವನ್ನು ಅನಧಿಕೃತವಾಗಿ ಅತಿಕ್ರಮಿಸಿ ಅರಣ್ಯ ಇಲಾಖೆ ಅಧಿಕಾರಿಗಳ ಸಮ್ಮತಿಯಿಂದ ಅಲ್ಲಿ ವ್ಯವಸಾಯ ಮಾಡುತ್ತಿದ್ದಾರೆ ಎಂಬುದು ಗಮನಕ್ಕೆ ಬಂದರೆ ತನಿಖೆ ಮಾಡಿ ಆಳತೆ ಮಾಡಿಸುವಿರಾ

†ಶ್ರೀ ಆಲೂರು ಹನುಮಂತಪ್ಪ.—ಅರಣ್ಯ ಇಲಾಖೆ ಅಧಿಕಾರಿಗಳ ವರದಿ ಪ್ರಕಾರ ಅತಿಕ್ರಮಿಸಿರುವುದು ಮತ್ತು ಅನಧಿಕೃತವಾಗಿ ಸಾಗುವಳಿ ಮಾಡಿರುವುದು ಗಮನಕ್ಕೆ ಬಂದಿಲ್ಲ. ಆ ರೀತಿ ಆಗಿರುವುದರ ಬಗ್ಗೆ ವಿವರ ಕೊಟ್ಟರೆ ಪರೀಕ್ಷೆ ಮಾಡಿಸುತ್ತೇವೆ.

ಶ್ರೀ ಎಸ್. ಪುಟ್ಟಸ್ವಾಮಿ.—ಹೊನ್ನಮಟ್ಟಿ ಎಸ್ಟೇಟ್ ಹಕ್ಕದಲ್ಲಿ ಕಾಡು ಜಮೀನಿನಿಂದ 50 ಎಕರೆ ಗೇಣಿಗೆ ಕೊಡಲಾಗಿದೆ ಎಂದು ಉತ್ತರದಲ್ಲಿದೆ. ಅದನ್ನು ಎಷ್ಟು ವರ್ಷಕ್ಕೆ ಗೇಣಿಗೆ ಕೊಡಲಾಗಿದೆ? ಗೇಣಿಗೆ ತೆಗೆದುಕೊಂಡಿದ್ದೇವೆ ಎಂದು 200 ಎಕರೆ ಅತಿಕ್ರಮಿಸಿ ಅಲ್ಲಿದ್ದ ಬೆಲೆ ಬಾಳುವ ಮರಗಳನ್ನು ಕಡಿದು ಮಾರಾಟ ಮಾಡಿ 200 ಎಕರೆಯಲ್ಲಿ ಕಾಫಿ ಬೆಳೆಸಿದ್ದಾರೆ. ಇದು ಗಮನಕ್ಕೆ ಬಂದಿದೆಯೇ? ಅಲ್ಲಿ ಗುಂಡಲ್ ಪ್ರಾಜೆಕ್ಟ್ ಮತ್ತಿತರ ಪ್ರಾಜೆಕ್ಟುಗಳನ್ನು ಕಟ್ಟಬೇಕೆಂದಿರುವಾಗ ಪಿಕಪ್ ಮಾಡಿರುವುದು ಗಮನಕ್ಕೆ ಬಂದಿದೆಯೇ?

ಶ್ರೀ ಆಲೂರು ಹನುಮಂತಪ್ಪ.—184 ಎಕರೆ ಹೊನ್ನಮಟ್ಟಿ ಎಸ್ಟೇಟಿನಲ್ಲಿರುವುದರಲ್ಲಿ 50 ಎಕರೆ ಕಾಫಿ ಬೆಳೆಯಲು ಲಾಯಕ್ಕಾಗಿಲ್ಲ ಎಂದು ಸರಕಾರಕ್ಕೆ ವಾಪಸು ಮಾಡಿ ಅದನ್ನು ಸರೆಂಡರ್ ಮಾಡುತ್ತೇವೆ, ಅದಕ್ಕೆ ಬದಲಾಗಿ 50 ಎಕರೆ ಕೆಳಗೆ ಕೊಟ್ಟರೆ ಅದರಿಂದ ಹೆಚ್ಚು ಪ್ರಯೋಜನವಾಗುವುದು ಎಂದು ಕೇಳಿದ್ದರ ಮೇರೆ ಸರಕಾರ 8ನೇ ಫೆಬ್ರುವರಿ 1967ರಲ್ಲಿ ಒಂದು ಆರ್ಡರು ಮಾಡಿ ಫಾರೆಸ್ಟಿಗೆ ಅವರಲ್ಲಿದ್ದ 50 ಎಕರೆ ಪಡೆದುಕೊಂಡು ಅದಕ್ಕೆ ಬದಲಾಗಿ ಬೇರೆ 50 ಎಕರೆ ಅವರಿಗೆ 99 ವರ್ಷಗಳ ಲೀಜ್‌ಗೆ ಕೊಡಲಾಗಿದೆ. ಹೆಚ್ಚು ಅವರು ತೆಗೆದುಕೊಳ್ಳುವಂತಿಲ್ಲ. ಇನ್ನೂ ಸರ್ವೆ ಆಗಿ ಡೀಮಾರ್ಕೇಷನ್ ಆಗಬೇಕು, ಅಗ್ರಿಮೆಂಟ್ ಆಬಗೆ ಇನ್ನೂ ಆಗಿಲ್ಲ. ಒಂದು ಎಕರೆಗೆ 15 ರೂಪಾಯಿ ಎಂದು ಪ್ರಪೋಸಲ್ ಬಂದಿದೆ. ಇನ್ನೂ ಅದು ತೀರ್ಮಾನವಾಗಿಲ್ಲ.

ಶ್ರೀ ಎಸ್. ಪುಟ್ಟಸ್ವಾಮಿ.—ಪಿಕಪ್ ಹಾಕಿದರೆ ಗುಂಡಲು ಪ್ರಾಜೆಕ್ಟಿಗೆ ತೊಂದರೆಯಾಗುವುದಿಲ್ಲವೇ?

ಶ್ರೀ ಆಲೂರು ಹನುಮಂತಪ್ಪ.—ಅದು ಗೊತ್ತಿಲ್ಲ.

ಶ್ರೀ ಎನ್. ಬಿ. ಹಾಲಪ್ಪ.—ಅದನ್ನು ವಿಚಾರಿಸಿ ಮಾಡಿಸುವಿರಾ?

ಶ್ರೀ ಆಲೂರು ಹನುಮಂತಪ್ಪ.—ಮಾಡಿಸುತ್ತೇನೆ.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ.—ಅರಣ್ಯ ಭೂಮಿಯಲ್ಲಿ ಕಾಫಿ ಎಸ್ಟೇಟನ್ನು ಮಾಡಿರುವ ಭೂಮಿಯ ವಿಸ್ತೀರ್ಣವನ್ನು ಚಾಮರಾಜನಗರ ಮತ್ತು ಕೊಳ್ಳೇಗಾಲ ತಾಲ್ಲೂಕುಗಳಿಗೆ ಸಂಬಂಧಪಟ್ಟ ಹಾಗೆ ಕೊಟ್ಟಿದ್ದಾರೆ ಮಾನ್ಯ ಪುಟ್ಟಸ್ವಾಮಿಯವರು ಹೇಳಿದಂತೆ ಸರ್ವೆ ಮಾಡಿಸಿ, ಅನಧಿಕೃತವಾಗಿ ಕಾಫಿ ಎಸ್ಟೇಟನ್ನು ಮಾಡಿದ್ದರೆ ಕೂಡಲೇ ಅವರನ್ನು ಅಲ್ಲಿಂದ ಬಿಡಿಸುತ್ತಾರೆಯೇ?

ಶ್ರೀ ಆಲೂರು ಹನುಮಂತಪ್ಪ.—ನನ್ನ ಮುಂದೆ ಇರತಕ್ಕ ವರದಿ ಪ್ರಕಾರ ಎನ್‌ಕ್ರೋಚ್‌ಮೆಂಟ್ ಆಗಿಲ್ಲ ಎಂದು ಇದೆ. ಮಾನ್ಯ ಸದಸ್ಯರು ಇದರ ಬಗ್ಗೆ ಬರೆದು ಕೊಡುವುದಾದರೆ ಎಗ್ಸಾಮಿನ್ ಮಾಡಿಸಿ, ಆ ತರಹ ಇದ್ದರೆ ಬಿಡಿಸುತ್ತೇನೆ.

ಶ್ರೀ ಎಸ್. ಪುಟ್ಟಸ್ವಾಮಿ.—ಎನ್‌ಕ್ರೋಚ್‌ಮೆಂಟ್ ಆಗಿದೆ ಎಂದು ಹೇಳಿದ್ದೇನೆ. ಅರಣ್ಯ ಇಲಾಖೆಯ ಅಧಿಕಾರಿಗಳು ಕಾಫಿ ಎಸ್ಟೇಟ್ ಮಾಲೀಕರ ಜೊತೆಯಲ್ಲಿ ಸೇರಿಕೊಂಡು ಅನಧಿಕೃತವಾಗಿ ವ್ಯವಸಾಯ ಮಾಡುವುದಕ್ಕೆ ಬಿಟ್ಟು ಕೊಟ್ಟಿದ್ದಾರೆ. ಇದಕ್ಕೆ ಮಾನ್ಯ ಮಂತ್ರಿಗಳ ಉತ್ತರವೇನು?

ಶ್ರೀ ಆಲೂರು ಹನುಮಂತಪ್ಪ.—ಅರಣ್ಯ ಅಧಿಕಾರಿಗಳು ಸರ್ಕಾರದ ಭೂಮಿಯನ್ನು ಸರ್ಕಾರದ ಹುಕುಂ ಇಲ್ಲದೆ ಸಾಮಾನ್ಯವಾಗಿ ಬಿಡುಗಡೆ ಮಾಡುವುದಕ್ಕೆ ಸಾಧ್ಯವಿಲ್ಲ, ತೆಗೆದುಕೊಂಡ ವರಿಗೂ ಇಟ್ಟುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಒಂದು ವೇಳೆ ಆ ತರಹ ಎನ್‌ಕ್ರೋಚ್‌ಮೆಂಟ್ ಆಗಿದ್ದರೆ, ಇದೇ ಸಭೆಯಲ್ಲಿ ಮಾನ್ಯ ರೆವಿನ್ಯೂ ಮಂತ್ರಿಗಳು ಹೇಳಿರುವಂತೆ, ರೆವಿನ್ಯೂ ಮತ್ತು ಅರಣ್ಯ ಇಲಾಖೆಯ ಭೂಮಿಯನ್ನು ಯಾರಾದರೂ ಎನ್‌ಕ್ರೋಚ್ ಮಾಡಿದ್ದು ಅದು ಬೋನಫೈಡಿ ಆಗಿದ್ದರೆ ಅಂಥ ಸಂದರ್ಭದಲ್ಲಿ ಏನು ಮಾಡಬೇಕೆಂದು ಯೋಚನೆ ಮಾಡಬೇಕಾಗುತ್ತದೆ.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ.—ಎನ್‌ಕ್ರೋಚ್‌ಮೆಂಟ್ ಆಗಿದೆ, ಆ ಪ್ರದೇಶಕ್ಕೆ ಸರ್ವೇಯರನ್ನು ಕಳುಹಿಸಿ ಸರ್ವೆ ಮಾಡಿಸಿ ಎನ್‌ಕ್ರೋಚ್ ಆಗಿರುವುದನ್ನು ಬಿಡಿಸುತ್ತಾರೆಯೇ ಎಂದು ಕೇಳುತ್ತಿದ್ದೇನೆ ಸ್ವಾಮಿ ?

ಶ್ರೀ ಆಲೂರು ಹನುಮಂತಪ್ಪ.—ಮಾನ್ಯ ಸಭೆಗೆ ಒಂದು ಭರವಸೆಯನ್ನು ಕೊಡುತ್ತೇನೆ. ಅನಧಿಕೃತವಾಗಿ ಒಂದು ಪೇಳೆ ಅರಣ್ಯ ಭೂಮಿಯನ್ನು ಯಾರಾದರೂ ಎನ್‌ಕ್ರೋಚ್‌ಮೆಂಟ್ ಮಾಡಿದ್ದರೆ ಅಂಥವನ್ನು ಕಡ್ಡಾಯವಾಗಿ ಎವಿಕ್ಟ್ ಮಾಡಬೇಕು ಎನ್ನುವುದು ಸರ್ಕಾರದ ಧೋರಣೆ.

ಶ್ರೀ ಎಸ್. ಪುಟ್ಟಸ್ವಾಮಿ.—(ಎಫ್)ಗೆ ಉತ್ತರವಾಗಿ ಯಾವ ರಾಜಕೀಯ ಒತ್ತಾಯವೂ ಇಲ್ಲ ಎಂದು ಹೇಳಿದ್ದಾರೆ. ಹೊನ್ನಮಟ್ಟಿ ಎಸ್ಟೇಟ್ ಭಾಗದಲ್ಲಿ ಬಿರ್ಲಾ ಸಂಸ್ಥೆಗೆ ಜಮೀನನ್ನು 99 ವರ್ಷಗಳ ಕಾಲ ಲೀಸಿಗೆ ಕೊಟ್ಟಿರುವುದು ರಾಜಕೀಯ ಪ್ರಭಾವಕ್ಕೆ ಒಳಪಟ್ಟು ಅಲ್ಲವೇ ?

ಶ್ರೀ ಆಲೂರು ಹನುಮಂತಪ್ಪ.—1946ರಲ್ಲಿ ಹಿಂದಿನ ಮದ್ರಾಸ್ ಸರ್ಕಾರದವರು 385 ಎಕರೆ ಭೂಮಿಯನ್ನು ಕೊಟ್ಟಿದ್ದಾರೆ ಮತ್ತು ಈಗ 184 ಎಕರೆ ಭೂಮಿಯಲ್ಲಿ ಅವರಿಗೆ ಎಸ್ಟೆಬ್ಲಿಷ್‌ಮೆಂಟ್ ಆಗಿ 50 ಎಕರೆ ಮಾತ್ರ ಕೊಟ್ಟಿದ್ದೇವೆ. ಬಾಕಿದೆಲ್ಲಾ ಮದ್ರಾಸ್ ಸರ್ಕಾರ ಕೊಟ್ಟಿದೆ. ಈ ಎಸ್ಟೇಟ್ ಆರ್. ಸಿ. ಪೋರೆಸ್ ಎನ್ನುವವರಿಗೆ ಇತ್ತು. ಅದನ್ನು ನೀಲಗಿರಿ ಪ್ಲಾಂಟೇಷನ್ಸ್‌ರವರಿಗೆ ಟ್ರಾನ್ಸ್‌ಫರ್ ಮಾಡಿದ್ದಾರೆ. ಅದು 1955ರಲ್ಲಿ ರಾಜ್ಯ ಪುನರ್ವಿಂಗಡಣೆ ಯಾಗುವುದಕ್ಕೆ ಮೊದಲು ಆಗಿರುವುದು. ಬೇರೆಯವರಿಗೆ ಯಾರಿಗೂ ಕೊಟ್ಟಿಲ್ಲ.

Janatha Bazaar at Gulbarga

274. **Sri D. B. KALMANKAR** (Aland).—

Will the Minister for Development be pleased to state :—

(*a*) whether a Janatha Bazaar has been opened at Gulbarga ;

(*b*) if so, the expenditure incurred so far and the profit made by it (information up to a latest convenient date may be furnished) ?

Sri B. L. GOWDA (Deputy Minister for Co-operation).—

(*a*) Yes.

(*b*) Expenditure during 1968-69 Rs. 1,01,449.62.
From 1st July to 31st December 69 Rs. 55,599.06.

The Janatha Bazaar did not earn profits during the first year.

Sri D. B. KALMANKAR.—May I know the name of the Chairman and other members of the Janatha Bazaar ?

† **Sri B. L. GOWDA.**—I do not know the names.

Sri J. P. SARWESH.—It is said that this Janatha Bazaar has suffered loss. To prevent incurring loss, will the Government put some of the members from the Opposition side in the management of the Janatha Bazaar ?

Sri B. L. GOWDA.—We do not work on party politics. Experienced persons will be nominated to the Janatha Bazaar.

ಶ್ರೀ ಬಾಪುಗೌಡ.—ರಾಜ್ಯದಲ್ಲಿರುವ ಜನತಾ ಬಜಾರ್‌ಗಳೆಲ್ಲ ಯಾರ ಅಧೀನದಲ್ಲಿವೆ ? ಅವು ಲಾಭದಲ್ಲಿ ಕೆಲಸ ಮಾಡುತ್ತಿವೆಯೋ ಅಥವಾ ನುಕ್ಸಾನಿನಲ್ಲಿ ಕೆಲಸ ಮಾಡುತ್ತಿವೆಯೋ ?